ನಿಧಿಯಿಂದ ಹಣದ ಸಹಾಯ ಕೊಡುವುದಕ್ಕೆ ಸಾಧ್ಯವಿದೆಯೇ ಎಂಬ ಬಗ್ಗೆ ಪರಿಶೀಲನೆಯನ್ನು ಮಾಡುತ್ತೇನೆ. ಮರದಿ ಸಂಪೂರ್ಣವಾಗಿ ಬಂದಮೇಲೆ ಕರ್ತವ್ಯದಲ್ಲಿ ಲೋಪ ಆಗಿದ್ದರೆ, ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ. ಅಂಥತ್ತ ನಿವಾರಣೆ ಕಾರ್ಯಕ್ರಮ ರಾಷ್ಟ್ರೀಯ ಕಾರ್ಯಕ್ರಮವಾಗಿರುವುದರಿಂದ ಇದರಲ್ಲಿ ನಿರ್ಲಕ್ಷ್ಯ ಇರಬಹುದು ಅಥವಾ ಬೇಜವಾಬ್ದಾರಿ ಕೆಲಸಗಳಾಗಿದ್ದರೆ ಇದರ ಬಗ್ಗೆ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳಲಾಗುವುದು. ಅಂಥತ್ತ ನಿವಾರಣೆ ಕಾರ್ಯಕ್ರಮ ಹಿಸ್ಸೆಡೆ ಆಗದೇ ಇರುವ ಹಾಗೆ ತಾವೆಲ್ಲರೂ ಕೂಡ ಸಹಕಾರವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಮರದಿ ಬಂದಮೇಲೆ ಯಾರೇ ತಪ್ಪಿತಸ್ಥರಿದ್ದರೂ ಅವರ ಮೇಲೆ ಕಠಿಣ ಕ್ರಮವನ್ನು ತೆಗೆದುಕೊಳ್ಳುತ್ತೇನೆಂದು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ಹೇಳಬಯಸುತ್ತೇನೆ.

(ಋ) ಪಶುವೈದ್ಯ ಸಹಾಯಕರ ತರಬೇತಿಗೆ ಆಯ್ಕೆಯ ಪಟ್ಟಿಗೆ ತಡೆ.

ಶ್ರೀ ಎ.ಟಿ. ರಾಮಸ್ವಾಮಿ (ಅರಕಲಗೂಡು ವಿಧಾನಸಭಾಕ್ಷೇತ್ರ) : ಅಧ್ಯಕ್ಷರೇ, ಮೈಸೂರು ವಿಭಾಗದ ಮಟ್ಟದಲ್ಲಿ ಪಶು ವೈದ್ಯಕೀಯ ಸಹಾಯಕರ ತರಬೇತಿಗೆ ಸಂದರ್ಶನವಾಯಿತು. ಇದಾದ ನಂತರ ಸುಮಾರು 356 ಅಭ್ಯರ್ಥಿಗಳು ಆಯ್ಕೆಯಾಗಿದ್ದಾರೆಂದು ಸೂಚಿಸುವ ಪಟ್ಟಿಯೂ ಕೂಡ ಪ್ರಕಟವಾಯಿತು. ಇದಾದ ಮೇಲೆ ಸರ್ಕಾರ ಏಕೆ ತಡೆಯಾಜ್ಞೆ ನೀಡಿದೆ? ಇದಕ್ಕೆ ಏನು ಕಾರಣ? ತರಬೇತಿಗೆ ಏನು ಆಯ್ಕೆ ಮಾಡುತ್ತಿದ್ದಾರೆ ಈ ಆಯ್ಕೆಯನ್ನು ಮೀಸಲಾತಿಯನ್ನು ಅನುಸರಿಸಿ, ಅಭ್ಯರ್ಥಿಗಳ ಅಂಕಗಳ ಆಧಾರದ ಮೇಲೆ ಮೆರಿಟ್ ಆಧಾರದ ಮೇಲೆ ಆಯ್ಕೆ ಮಾಡುವುದಕ್ಕೆ ಸರ್ಕಾರಕ್ಕೆ ಏನು ತೊಂದರೆ ಇದೆ? ಈಗ ಏನು ಆಯ್ಕೆ ಆಗಿದೆ ಅದರಲ್ಲಿ ಹಣದ ವ್ಯವಹಾರ ನಡೆದಿದೆ. ಬಡವರ ಮತ್ತು ಅರ್ಹರ ಆಯ್ಕೆಯಾಗದೇ ಅನರ್ಹರ ಮತ್ತು ಹಣವಂತರು ಆಯ್ಕೆಯಾಗಿದ್ದಾರೆ. ಬಹುತೇಕ ಮೆರಿಟ್ ಅಭ್ಯರ್ಥಿಗಳಿಗೆ ಆಯ್ಕೆ ಆಗುವುದಕ್ಕೆ ಅವಕಾಶವಾಗಿಲ್ಲ. ಇದನ್ನು ನೋಡಿಕೊಂಡು ಸರ್ಕಾರ ಮೂಕ ಪ್ರೇಕ್ಷಕನಾಗಿ ಇರುತ್ತದೆಯೆ? ವ್ಯವಸ್ಥೆಯನ್ನು ಸರಿಪಡಿಸುವುದಕ್ಕೆ ಆಗುತ್ತದೆಯೆ? ಏಕೆಂದರೆ ವ್ಯವಸ್ಥೆಯನ್ನು ಸರಿಪಡಿಸದಿದ್ದರೆ ಲೋಪದೋಷಗಳನ್ನು ನಿವಾರಣೆ ಮಾಡುವುದಕ್ಕೆ ಆಗುವುದಿಲ್ಲ. ಆದುದರಿಂದ ಮೆರಿಟ್ ಆಧಾರದ ಮೇಲೆ ಮೀಸಲಾತಿಗೆ ಒಳಪಟ್ಟು ತರಬೇತಿಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡುವುದಕ್ಕೆ ಸರ್ಕಾರ ಪುನರ್ ಪರಿಶೀಲನೆ ಮಾಡಬೇಕೆಂದು ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

1.10 ಪಿ.ಎಂ

ಶ್ರೀ ಬಿ. ಶಿವರಾಂ (ಗಂಡಸಿ) : ಮಾನ್ಯ ಅಧ್ಯಕ್ಷರೆ, ಮಾನ್ಯ ರಾಮಸ್ವಾಮಿಯವರು ಏನು ಹೇಳಿದ್ದಾರೊ ಅದನ್ನು ನಾನು ಬೆಂಬಲಿಸುತ್ತಾ ಈಗ ಮೈಸೂರು ವಿಭಾಗದಲ್ಲಿ 375 ಪಶುವೈದ್ಯ ಸಹಾಯಕರ ಹುದ್ದೆಗಳಿಗೆ ಸಂದರ್ಶನವಾಗಿ ಅದು ಸ್ಪೇಯಾಗಿದೆ ಎಂದು ತಿಳಿದುಬಂದಿದೆ. ಬೆಂಗಳೂರಿನಲ್ಲಿ ಕೂಡ ಸಂದರ್ಶನವಾಗಿದೆ ಅದು ಕೂಡ ಪ್ರಕಟಣೆಯಾಗಿಲ್ಲ. ಇನ್ನು ಗುಲ್ಬರ್ಗಾ ಬೆಳಗಾಂನಲ್ಲೂ ಕೂಡ ತಲಾ 375, 375ರಂತೆ ಒಟ್ಟು 1500 ಹುದ್ದೆಗಳನ್ನು ತುಂಬಬೇಕು. ಈಗಾಗಲೆ 1100 ವೇಕೆನ್ಸಿಗಳು ಈ

ರಾಜ್ಯದಲ್ಲಿವೆ. ಆರು ತಿಂಗಳು ಟ್ರೈನಿಂಗ್ ಇದು ವಿಳಂಬವಾಗುವುದರಿಂದ ಗ್ರಾಮಾಂತರ ಪ್ರದೇಶಗಳಲ್ಲಿ ನೇಮಕಾತಿಯಾಗದೆ ಅನಾನುಕೂಲಗಳು ಹೆಚ್ಚಾಗುತ್ತದೆ. ಈ ಹಂತದಲ್ಲಿ ನಮ್ಮ ಒತ್ತಾಯವೇನೆಂದರೆ ಪ್ರಕಟಣೆ ಮಾಡುವಂಥಾದ್ದು, ಸ್ಟೇ ಮಾಡುವುದು, ಅವ್ಯವಹಾರ ಎನ್ನುವಂಥಾದ್ದಕ್ಕೆ ಹೆಚ್ಚು ಅವಕಾಶವನ್ನು ಕೊಡದೆ, ರೋಸ್ಟರ್ ಕಂ ಮೆರಿಟ್ ಇದು ಈಗಾಗಲೇ ಸರ್ಕಾರದಲ್ಲಿ ಆಗುತ್ತದೆ. ಈ ರೀತಿಯಾಗಿ ಉಪಾಧ್ಯಾಯರ ನೇಮಕಾತಿಯಾಗಿದೆ, ಸರ್ವೆ ಡಿಪಾರ್ಟ್‌ಮೆಂಟ್‌ನಲ್ಲಿ ನೇಮಕಾತಿಯಾಗಿದೆ. ಈ ರೀತಿಯಾಗಿ ಎಲ್ಲಾ ಇಲಾಖೆಗಳಲ್ಲೂ ಮಾಡಿದರೆ ಹಳ್ಳಿಗಳಲ್ಲಿ ಇರುವಂತಹ ಮಕ್ಕಳಿಗೆ 10 ಅಂಕಗಳನ್ನು ಕೊಡುವಂತಹ ವ್ಯವಸ್ಥೆ ಇರುವುದರಿಂದ ಎಲ್ಲರಿಗೂ ನ್ಯಾಯ ದೊರೆಯುತ್ತದೆ ಎನ್ನುವಂಥದ್ದರ ಮೇಲೆ ನಾನು ಮಾನ್ಯ ರಾಮಸ್ವಾಮಿಯವರು ಹೇಳಿರುವಂಥದ್ದಕ್ಕೆ ಬೆಂಬಲ ನೀಡುತ್ತಾ ಇದನ್ನು ಕೂಡಲೇ ಅನುಷ್ಠಾನಕ್ಕೆ ತರಬೇಕೆಂದು ಇಲ್ಲಿ ಮಾನ್ಯ ಮುಖ್ಯಮಂತ್ರಿಯವರು ಇರುವುದರಿಂದ ನಾನು ಒತ್ತಾಯ ಪೂರ್ವಕವಾಗಿ ಈ ಮಾತನ್ನು ಹೇಳಲಿಚ್ಛಿಸುತ್ತೇನೆ.

ಅಧ್ಯಕ್ಷರು : ಸಂಬಂಧಪಟ್ಟ ಮಂತ್ರಿಯವರು ಇದ್ದಾರೆ, ಅವರು ಹೇಳುತ್ತಾರೆ. ಅವರೆಲ್ಲಾ ಯುವಕರಿದ್ದಾರೆ, ಉತ್ತರ ಕೊಡುತ್ತಾರೆ.

ಶ್ರೀ ಬಿ.ಬಿ. ನಿಂಗಯ್ಯ : ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯದಲ್ಲಿ ಸುಮಾರು 1200 ಕಾಂಪೌಂಡರ್ ಹುದ್ದೆಗಳು ಖಾಲಿ ಇವೆ ಲೈವ್ ಸ್ಟಾಕ ಇನ್ಸಪೆಕ್ಟರಗಳಿಗಾಗಿ ಟೈಮ್ ಬಾಂಡ್ ಪ್ರಮೋಷನ್ ಕೊಡುವಂತಹ ಸಂದರ್ಭದಲ್ಲಿ ಈ 1200 ಹುದ್ದೆಗಳು ಖಾಲಿಯಾಗಿವೆ. ನಾಲ್ಕು ಡಿವಿಜನಗಳಲ್ಲಿ ತರಬೇತಿಗೆ ತೆಗೆದುಕೊಂಡು ಅನಂತರ ಇವರನ್ನು ನೇಮಕಾತಿ ಮಾಡಿಕೊಳ್ಳುವಂಥಾದ್ದು ಮೊದಲಿನಿಂದಲೂ ಬಂದಿರುವಂತಹ ಪದ್ಧತಿಯಾಗಿದೆ. ಈಗಾಗಲೇ ಮೈಸೂರು ಡಿವಿಜನ್‌ನಲ್ಲಿ ಆಯ್ಕೆ ನಡೆದಿದೆ. ಇಲ್ಲಿ ಡಿಸೆಂಬರ್ 18ರಿಂದ 30 ರವರೆಗೆ ಸಂದರ್ಶನ ನಡೆದು ಪಟ್ಟಿ ಆಗಿದೆ. ಸಂದರ್ಶನಕ್ಕೆ ಸಾಮಾನ್ಯವಾಗಿ 1:10 ಎಂದು ಅಭ್ಯರ್ಥಿಗಳನ್ನು ಕರೆದು ಅದರಲ್ಲಿ ಒಬ್ಬರು ಆಯ್ಕೆಯಾಗುತ್ತಾರೆ, ಇನ್ನು 9ಜನರು ಉಳಿಯುತ್ತಾರೆ ಇವರನ್ನು ಕೈಬಿಡಬೇಕಾಗುತ್ತದೆ. ಅದರಂತೆ 356 ಹುದ್ದೆಗಳು ಎಂದರೆ ಒಟ್ಟು 3560 ಅಭ್ಯರ್ಥಿಗಳನ್ನು ನಾವು ಸಂದರ್ಶನಕ್ಕೆ ಕರೆಯುತ್ತೇವೆ. ಈ ಸಂದರ್ಭದಲ್ಲಿ ಮಾನ್ಯ ಸದಸ್ಯರು ಮೀಸಲಾತಿಯ ಬಗ್ಗೆ ಮಾತನಾಡಿದರು. ಇದರಲ್ಲಿ ಯಾವುದೇ ರೀತಿಯಲ್ಲಿ ವ್ಯತಿರಿಕ್ತ ಮಾಡಿಲ್ಲ. ಎಲ್ಲಾ ಮೀಸಲಾತಿಯ ನಿಯಮಗಳನ್ನು ನಾವು ಪಾಲನೆ ಮಾಡಿದ್ದೇವೆ. ಅವರಿಗೆ ಹುದ್ದೆಗಳನ್ನು ಕೊಡುವಂತಹ ಸಂದರ್ಭದಲ್ಲಿ ರೋಸ್ಟರ್ ಎಂದು ಹೇಳಿದ್ದೀರಿ, ಅದನ್ನು ಕಡ್ಡಾಯವಾಗಿ ಪಾಲನೆ ಮಾಡಿದ್ದೇವೆ. ಈಗಾಗಲೇ ಮೊದಲನೆಯ ಡಿವಿಜನದು ಅನೌನ್ಸ ಮಾಡಿದ್ದೇವೆ. ಅಲ್ಲಿ ಕೆಲವು ದೂರುಗಳು ಅವರು ಹೇಳಿದ ಹಾಗೆ ಲಿಖಿತ ಮೂಲಕ ಬಂದಿಲ್ಲ. ಮೌಖಿಕ ದೂರುಗಳು ಕೆಲವು ಬಂದಿರುವುದರಿಂದ ನಾನು ನಮ್ಮ ಇಲಾಖೆಯ ಉನ್ನತ ಅಧಿಕಾರಿಗಳನ್ನು ವಿಚಾರಣೆ ಮಾಡುವುದಕ್ಕೆ ತಿಳಿಸಿದ್ದೇನೆ. ಆದುದರಿಂದ ಅದನ್ನು ಸ್ವಲ್ಪ ದಿವಸಗಳವರೆಗೆ ಅಬೆಯನ್ಸ್‌ನಲ್ಲಿ ಇಟ್ಟಿದ್ದೇನೆ. ಅದರ ವರದಿ ಬಂದನಂತರ ಅದರ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ. ಅದೇ ರೀತಿಯಾಗಿ ಬೆಂಗಳೂರಿನ ವಿಭಾಗದಲ್ಲೂ ಕೂಡ ದೂರುಗಳು ಬಂದಿರುವುದರಿಂದ ಅದನ್ನು ಕೂಡ ಅಧಿಕಾರಿಗಳಿಂದ ವಿಚಾರಣೆ ಮಾಡಿಸುತ್ತಿದ್ದೇನೆ. ಆ ರೀತಿ ಆರೋಪಗಳು ಏನಾದರೂ ನಿಜವಾಗಿದ್ದಲ್ಲಿ ನಮ್ಮ ಸರ್ಕಾರ ಸೂಕ್ತವಾದಂತಹ ಕ್ರಮವನ್ನು

ತೆಗೆದುಕೊಳ್ಳುತ್ತದೆ. ಅದೇ ರೀತಿ ಮುಂದೆ ಎರಡು ಡಿವಿಜನ್‌ಗಳಲ್ಲೂ ಕೂಡ ಯಾವುದೇ ರೀತಿಯ ಗೊಂದಲಕ್ಕೆ ಅವಕಾಶ ಕೊಡದ ಹಾಗೆ ಸರ್ಕಾರ ಎಚ್ಚರಿಕೆಯನ್ನು ವಹಿಸುತ್ತದೆ ಎಂದು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ತಿಳಿಸಬಯಸುತ್ತೇನೆ.

ಶ್ರೀ ಎ.ಟಿ. ರಾಮಸ್ವಾಮಿ : ಇವತ್ತು ಇರುವಂತಹ ತೊಂದರೆ ಏನೆಂದರೆ ಈಗಾಗಲೆ ಬೇರೆ ಇಲಾಖೆಗಳಲ್ಲಿ ರೋಸ್ಟರ್ ಕಂ ಮೆರಿಟ್ ಎಂದು ಮಾಡಿರುವುದರಿಂದ ಏನು ಲೋಪದೋಷಗಳು ಆಗುತ್ತವೆ ಅದೆನ್ನು ನಿವಾರಣೆ ಮಾಡಿಕೊಳ್ಳಬಹುದು. ಅದಕ್ಕೆ ಸರ್ಕಾರ ಏಕೆ ಬದ್ಧವಾಗಿಲ್ಲ?

ಶ್ರೀ ಬಿ.ಬಿ. ನಿಂಗಯ್ಯ : ಮಾನ್ಯ ಅಧ್ಯಕ್ಷರೆ, ಮೆರಿಟ್ ವಿಚಾರ ಬಂದಾಗ ರೂಲ್ ಕೂಡ ರೋಸ್ಟರ ಪ್ರಕಾರ ಬರಬೇಕೆಂಬುದು ತಮಗೂ ಗೊತ್ತಿದೆ. ಶೇ. 50ರಷ್ಟು ರಿಸರ್ವೇಷನ್ ಏನು ಇದೆ, ಅದನ್ನು ಕೊಡುವಂತಹ ಸಂದರ್ಭದಲ್ಲಿ ನಾವು ಕಡ್ಡಾಯವಾಗಿ ಅದನ್ನು ಪಾಲನೆ ಮಾಡುವಂಥಾದ್ದು ನಮ್ಮ ಕರ್ತವ್ಯ ಹಾಗು ಅದು ಸರ್ಕಾರದ ಸೂಚನೆಯಾಗಿದೆ. ಇಲ್ಲಿ ಪ್ಯೂರಲಿ ಮೆರಿಟ ಏನ್ನುವಂತಹ ವಿಚಾರ ಬಂದಾಗ ಅಲ್ಲಿಯೂ ಕೂಡ ರೊಸ್ಟರ್ ಎನ್ನುವಂಥಾದ್ದನ್ನು ಮಾನ್ಯ ಸದಸ್ಯರು ಏನು ಸಲಹೆ ಮಾಡಿದ್ದಾರೆ, ಅದನ್ನು ಸರ್ಕಾರ ಆಲೋಚನೆ ಮಾಡುತ್ತದೆ.

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೆ, ಇಡೀ ರಾಜ್ಯ ವಿದ್ಯುತ್ ಬರದಿಂದ ನಲುಗುತ್ತಿರುವಂತಹ ಸಂದರ್ಭದಲ್ಲಿ ಇವತ್ತಿನ ವೃತ್ತಪತ್ರಿಕೆಗಳಲ್ಲಿ...

ಅಧ್ಯಕ್ಷರು : ಇದಕ್ಕೆ ಸಂಬಂಧಪಟ್ಟಂತ ಮಂತ್ರಿಗಳು ಇದ್ದಾರೆಯೆ.

ಶ್ರೀ ಅರಗ ಜ್ಞಾನೇಂದ್ರ : ಇಲ್ಲ, ಆದರೆ ಆ ಖಾತೆ ಮಾನ್ಯ ಮುಖ್ಯಮಂತ್ರಿಯವರ ಅಧೀನದಲ್ಲಿದೆ.

ಅಧ್ಯಕ್ಷರು : ಮುಖ್ಯಮಂತ್ರಿಯವರ ಅಧೀನದಲ್ಲಿದ್ದರೆ, ಅವರು ಬೇರೆಯವರ ಅಧೀನದಲ್ಲಿದ್ದಾರೆ. ಈಗ ನಾನು ಏನು ಮಾಡಲಿ, ಮೊದಲನೆಯ ದಿವಸವೇ ಅಧಿಕಾರ ಸ್ವೀಕಾರ ಮಾಡುವಂತಹ ಸಂದರ್ಭದಲ್ಲಿ ಆ ಕೆಲಸ ಸದನದಲ್ಲಿ ನಡೆಯಬಾರದೆಂದು ಹೇಳಿದ್ದೆ.

(ಖೂ) ಕರ್ನಾಟಕ ರಾಜ್ಯ ವಿದ್ಯುತ್ ನಿಗಮದ ಎರಡು ಸಾವಿರ ಜನ ಪದವೀಧರ ಇಂಜಿನಿಯರುಗಳಿಂದ ಮುಷ್ಕರ

ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಅಧ್ಯಕ್ಷರೆ, ನಾನು ತಮ್ಮ ಮುಖಾಂತರ ವಿಷಯವನ್ನು ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ತರುತ್ತೇನೆ. ಇಡೀ ರಾಜ್ಯ ವಿದ್ಯುತ್ ಬರದಿಂದ ನಲುಗುತ್ತಿದೆ. ಈ ಸಂದರ್ಭದಲ್ಲಿ ರಾಜ್ಯದ ವೃತ್ತಪತ್ರಿಕೆಗಳಲ್ಲಿ ಒಂದು ದೊಡ್ಡ ಕರಾಳ ಸುದ್ದಿ ಇಡೀ ರಾಜ್ಯದ ಜನರಿಗೆ ಬಂದಿದೆ. ಇದು ಏನೆಂದರೆ ಕರ್ನಾಟಕ ರಾಜ್ಯ ವಿದ್ಯುತ್ ನಿಗಮದ ಸುಮಾರು 8 ಘಟಕಗಳು, 3,200 ಮೆ.ವ್ಯಾ ವಿದ್ಯುತ್ ಉತ್ಪಾದನೆ ಮಾಡುವಂತಹ ಘಟಕಗಳು ಎರಡು ಸಾವಿರ ಜನ ಪದವೀಧರ ಇಂಜಿನೀಯರ್‌ಗಳು ಮುಷ್ಕರಕ್ಕೆ ಕರೆ ಕೊಟ್ಟಿದ್ದಾರೆ. ಇನ್ನು ಕೇವಲ 72 ಗಂಟೆಗಳ ಕಾಲ